ಮದುವೆಯೆಂಬ ಸೇಫ್ಟಿ ಪಿನ್ನು?
ರಿಲ್ಯಾಕ್ಸ್ ಮಾಮ್, ಲಿವ್‌ಇನ್ನು ಮದುವೆ ಎರಡೂ ಒಂದೇ...
ಎರಡೂ ಒಂದೇನಾ?

ಮುಂದೆ ದೈವಕೃಪೆಯಿಂದಲೋ ನನ್ನ ಬಲವಂತದಿಂದಲೋ
ಅಂತೂ ಮದುವೆಯಾದಳು ಮೂವತ್ತೈದಕ್ಕೆ
ಮದುವೆಯಂತೂ ತಡವಾಯಿತು, ಬೇಗ ಮಗುವಾಗಲಿ ಮಗಳೇ
ಮೊಮ್ಮಗುವನಾಡಿಸುತ್ತ ಮರೆಯುವೆ ಬದುಕಿನ ರಗಳೆ
ಮಾಮ್... ಯಾವಾಗ್ಲೂ ನಿಂದು ಓಲ್ಡ್‌ಫ್ಯಾಷನ್ನು
ಏನರ್ಜೆಂಟಿದೆ ಮಗುವಿಗೆ? ಶೈತ್ಯೀಕರಿಸುವೆ ನನ್ನ ಅಂಡವನ್ನು
ಹಾಂ!? ತಂಪುಪೆಟ್ಟಿಗೆಯಲ್ಲಿಡುತ್ತೀಯಾ ಮೊಟ್ಟೆಯನ್ನ?
ಮುದುಕಿಯಾದ ಮೇಲೆ ಹೆರುತ್ತೀಯಾ?
ಚಿಲ್ಲ್ಯಾಕ್ಸ್ ಮಾಮ್, ಬಾಡಿಗೆಗೆ ಗರ್ಭ ಸಿಗುತ್ತೆ, ಗೊತ್ತಿಲ್ವಾ?
ಹೆತ್ತರೇನು ಹೆರಿಸಿದರೇನು, ಎರಡೂ ಒಂದೇ

ಎರಡೂ ಒಂದೇನಾ? ನನಗೇನೋ ಅನುಮಾನ
ಅನ್ನವನ್ನು ತಂಪುಪೆಟ್ಟಿಗೆಯಲ್ಲಿಟ್ಟಂತೆ ಪ್ರೀತಿಯನ್ನೂ ಇಡಬಹುದಾ?
ಎರಡೂ ಒಂದೇನಾ?

● **ಎಲ್.ಜಿ. ಮೀರಾ**



ವಾಗೀಶ ಹೆಗಡೆ